# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ.

ಕವಿಪ್ರನಿನಿ/ಬಿ. 93/ 35982/ 2014-15

ನಿಗಮ ಕಾರ್ಯಾಲಯ, ಕಾವೇರಿ ಭವನ,
ಬೆಂಗಳೂರು. ದಿನಾಂಕ: 14-10-2015.

ಮುಖ್ಯ ಪ್ರಧಾನ ವ್ಯವಸ್ಥಾಪಕರು (ಹ ಮಾತ್ತು ವಾ),
ಬೆಸ್ಕಾಂ,
ಆರ್ಥಿಕ ಸಲಹೆಗಾರರು,
ಕವಿಪ್ರನಿನಿ, ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂ,
ಮುಖ್ಯ ಆರ್ಥಿಕ ಅಧಿಕಾರಿ,
ಸೆಸ್ಕ್,
ನಿರ್ದೇಶಕರು (ವಾಣಿಜ್ಯ),
ಪಿಸಿಕೆಎಲ್.

ಮಾನ್ಯರೆ,

ವಿಷಯ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಅನುಬಂಧ –4 ರ ಮೃದು ಪ್ರತಿಯನ್ನು ನೀಡಲು ವ್ಯವಸ್ಥೆ ಮಾಡುವ ಬಗ್ಗೆ.

ಉಲ್ಲೇಖ ನಿಗಮದ ಆದೇಶದ ಸಂಖ್ಯೆ ಕವಿಪ್ರನಿನಿ/ಬಿ. 93/ 35978/ 2014-15 ರಲ್ಲಿ ದಿನಾಂಕ 4-05-2015

*****

ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ದಿನಾಂಕ 1-4-2006 ರಿಂದ ಜಾರಿಗೆ ತಂದಿರುವ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ನಿರ್ವಹಣೆಯನ್ನು ಉಲ್ಲೇಖದಲ್ಲಿರುವ ನಿಗಮದ ಆದೇಶದಂತೆ LIC – P&GS Unit, Bengaluru ಸಂಸ್ಥೆಗೆ ವಹಿಸಲಾಗಿದೆ. ಸದರಿ ಯೋಜನೆಯ ನಿರ್ವಹಣೆಯ ಬಗ್ಗೆ LIC – P&GS Unit, Bengaluru ಸಂಸ್ಥೆಯು ಒಪ್ಪಿಕೊಂಡಿರುವಂತೆ ನಿಧಿ ನಿರ್ವಹಣೆಯನ್ನು ಮಾಡುವುದರೊಂದಿಗೆ ಅಧಿಕಾರಿ / ನೌಕರವಾರು ಲೆಕ್ಕವನ್ನು ಸಹ ನಿರ್ವಹಣೆ ಮಾಡಬೇಕಿರುತ್ತದೆ. ಸದರಿ ಕಾರ್ಯಕ್ಕಾಗಿ ಅನುಬಂಧ –4 ರ ಮೃದು ಪ್ರತಿಯನ್ನು EXCEL FORMAT ನಲ್ಲಿ ಕೆಇಎನ್‌ಡಿಸಿಪಿಎಸ್ ಘಟಕವು ನೀಡಬೇಕಾಗಿರುತ್ತದೆ.

ಪ್ರಾರಂಭಿಕವಾಗಿ ಎಪ್ರಿಲ್ 2015 ರ ತಿಂಗಳ ಪಿಂಚಣಿ ವಂತಿಗೆಯಿಂದ ಪ್ರಾರಂಭಿಸಿ LIC (P&GS) Unit, Bangalore ಸಂಸ್ಥೆಗೆ ನಿಧಿ ವರ್ಗಾವಣೆ ಮಾಡಲಾಗುತ್ತಿದ್ದು, ಎಪ್ರಿಲ್ 2015 ರಿಂದ ತಹಲ್ ವರೆಗೆ ಅನುಬಂಧ –4 ರ ಮೃದು ಪ್ರತಿಯನ್ನು EXCEL FORMAT ನಲ್ಲಿ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಕವಿಪ್ರನಿನಿ ಮತ್ತು ವಿಸಕಂಗಳು ತಕ್ಷಣ ನೀಡಬೇಕಾಗಿರುತ್ತದೆ. ನಂತರದ ಮುಂದಿನ ತಿಂಗಳುಗಳಲ್ಲಿ ಪಿಂಚಣಿ ವಂತಿಗೆಯನ್ನು ಸಂಬಳ ಪಾವತಿಯೆಂದು

ಪರಿಗಣಿಸಿ (On par with Salary) ಸಂಬಳ ಬಟವಾಡೆ ಮಾಡಿದ ದಿನಾಂಕದಂದೇ ನಿಧಿ ವರ್ಗಾವಣೆ ಮಾಡಿದ ತಕ್ಷಣ ಅನುಬಂಧ –4 ರ ಮೃದು ಪ್ರತಿಯನ್ನು EXCEL FORMAT ನಲ್ಲಿ ಕೇಎನ್‌ಡಿಸಿಪಿಎಸ್ ಘಟಕಕ್ಕೆ ಕವಿಪ್ರನಿನಿ ಮತ್ತು ವಿಸಕಂಗಳು ನೀಡಬೇಕಾಗಿರುತ್ತದೆ.

ಮೇಲಿನ ಹಿನ್ನಲೆಯಲ್ಲಿ , ಏಪ್ರಿಲ್ 2015 ರಿಂದ ತಹಲ್ ವರೆಗೆ ಅನುಬಂಧ –4 ರ ಮೃದು ಪ್ರತಿಯನ್ನು EXCEL FORMAT ನಲ್ಲಿ ಕೇಎನ್‌ಡಿಸಿಪಿಎಸ್ ಘಟಕಕ್ಕೆ ತಕ್ಷಣ ಒದಗಿಸಲು ಕವಿಪ್ರನಿನಿ ಮತ್ತು ವಿಸಕಂಗಳ ಆರ್ಥಿಕ ಸಲಹೆಗಾರರು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಸೂಚಿಸಲಾಗಿದೆ.

ಕವಿಪ್ರನಿನಿ ಮತ್ತು ವಿಸಕಂಗಳು ನೀಡುವ ಅನುಬಂಧ –4 ರ ಮೃದು ಪ್ರತಿಯನ್ನು LIC – P&GS Unit, Bengaluru ಸಂಸ್ಥೆಗೆ ನೀಡಿದ ನಂತರ ಸದರಿ ಯೋಜನೆಯ ಎಲ್ಲಾ ಅಧಿಕಾರಿ / ನೌಕರರಿಗೆ LIC ಸಂಸ್ಥೆಯು ಅದರ ಗುರುತಿನ ಸಂಖ್ಯೆಯನ್ನು ನೀಡುವುದು. ಅದರ ಮೃದು ಪ್ರತಿಯನ್ನು ಕವಿಪ್ರನಿನಿ ಮತ್ತು ವಿಸಕಂಗಳಿಗೆ ಒದಗಿಸಲಾಗುವುದು. ನಂತರದ ತಿಂಗಳುಗಳಿಗೆ, LIC ಸಂಸ್ಥೆಯು ನೀಡುವ ಮೃದು ಪ್ರತಿಯ ನಮೂನೆಯಲ್ಲಿಯೇ ಎಲ್ಲಾ ಅಧಿಕಾರಿ / ನೌಕರರ ವಂತಿಗೆ ವಿವರಗಳನ್ನು ಕೇಎನ್‌ಡಿಸಿಪಿಎಸ್ ಘಟಕಕ್ಕೆ ಒದಗಿಸಲು ಕವಿಪ್ರನಿನಿ ಮತ್ತು ವಿಸಕಂಗಳ ಆರ್ಥಿಕ ಸಲಹೆಗಾರರು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಸೂಚಿಸಲಾಗಿದೆ. LIC ಸಂಸ್ಥೆಯು ನಿಗಧಿಪಡಿಸಿರುವ ನಮೂನೆಯ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಪತ್ರದೊಂದಿಗೆ ಕಳುಹಿಸಲಾಗಿದೆ.

ಇದನ್ನು ಅತ್ಯಂತ ಜರೂರು ಎಂದು ಪರಿಗಣಿಸಿ, ಆದ್ಯತೆಯ ಮೇಲೆ ಕೋರಿರುವ ವಿವರಗಳನ್ನು ಒದಗಿಸಲು ವ್ಯವಸ್ಥೆ ಮಾಡಬೇಕೆಂದು ನಿರ್ದೇಶಿಸಲಾಗಿದೆ

ತಮ್ಮ ವಿಶ್ವಾಸಿ

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ಕವಿಪ್ರನಿನಿ

Annexure -1

| SL No. | Name of the employee | Employee ID | Date of Birth | Date of Joining | Salary | Rate of Contribution | Accumulated Pension Amount(with Interes) |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |

Annexure -2

| SL No. | LIC ID No. | Name of the employee | Date of Birth | Date of Joining | Salary | Rate of Contribution | Contribution Amount |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |